**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ-2 ಚಾಸಾ- 2**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸುನಿಲ್ |
| ತಂದೆಯ ಹೆಸರುಃ | : | ಕೆ ವೆಂಕಟೇಶ್ |
| ವಯಸ್ಸುಃ | : | 43 ವರ್ಷ |
| ಉದ್ಯೋಗಃ | : | ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಇಲಾಖೆ, ಕುಣಿಗಲ್ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 14-02-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

2013-14ರ ಅವಧಿಯಲ್ಲಿ ಹಾಸನದ ತಾಲ್ಲೂಕು ಪಂಚಾಯ್ತಿ ಕಛೇರಿಯಲ್ಲಿ ಸಹಾಯಕ ವಿಸ್ತರಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಜುಲೈ 2013ರಲ್ಲಿ ಲೋಕಾಯುಕ್ತ ಪೊಲೀಸ್ ಠಾಣೆಯ ಡಿವೈ ಎಸ್ ಪಿ ರವರು ತಾಲ್ಲೂಕು ಪಂಚಾಯ್ತಿಯ ಇ ಒ ರವರಿಗೆ ಸಿಬ್ಬಂದಿಗಳನ್ನು ಕಳುಹಿಸಿಕೊಡುವಂತೆ ಕೇಳಿದ ಮೇರೆಗೆ ನನ್ನನ್ನು ಕಳುಹಿಸಿಕೊಟ್ಟರು. ಸಂಜೆ 5 ಗಂಟೆಗೆ ನಾನು ಲೋಕಾಯುಕ್ತ ಠಾಣೆಗೆ ಹೋದೆನು. ಅಲ್ಲಿ ನರಸಿಂಹಮೂರ್ತಿ ಮತ್ತು ಶಾಂತಿನಾಥ ವಣ್ಣೂರ್ ಎಂಬ ಪೊಲೀಸ್ ಅಧಿಕಾರಿಗಳು ಇದ್ದರು. ಅವರು ನಮಗೆ ಮಾರನೇ ದಿನ ಬೆಳಿಗ್ಗೆ 5 ಗಂಟೆಗೆ ಬರುವಂತೆ ಹೇಳಿ

ಕಳುಹಿಸಿಕೊಟ್ಟರು.

3.ಮರುದಿನ ಬೆಳಿಗ್ಗೆ 5 ಗಂಟೆಗೆ ನಾವು ಅಲ್ಲಿಗೆ ಹೋದೆವು. 5-30 ಗಂಟೆಗೆ ನಮ್ಮನ್ನು ಉದಯಗಿರಿ ಬಡಾವಣೆಗೆ ಕರೆದುಕೊಂಡು ಹೋದರು. 6 ಗಂಟೆಗೆ ಒಂದು ಮನೆಯ ಬಳಿ ಕರೆದುಕೊಂಡು ಹೋದರು. ಆ ಮನೆಯ ಮುಂದೆ ಗೇಟು ಇತ್ತು. ಗೇಟು ತೆಗೆದು ಲೋಕಾಯುಕ್ತ ಪೊಲೀಸರು ಒಳಗೆ ಹೋಗಿ ಬಾಗಿಲು ಬಡಿದಾಗ ಓರ್ವ ವ್ಯಕ್ತಿ ಬಂದು ಬಾಗಿಲು ತೆರೆದರು. ಸದರಿ ವ್ಯಕ್ತಿ ತನ್ನ ಹೆಸರು ಆನಂದ, ಸಹಾಯಕ ಇಂಜಿನಿಯರ್, ಪೌರಾಡಳಿತ ಇಲಾಖೆ ಎಂದು ತಿಳಿಸಿದರು. ಅವರಿಗೆ, ಕೋರ್ಟಿನಿಂದ ಆದೇಶ ಬಂದಿದೆ ಎಂದು ಹೇಳಿ ಸರ್ಚ್ ವಾರೆಂಟ್ ನ್ನು ತೋರಿಸಿದರು. ನಂತರ ಮನೆಯಲ್ಲಿ ಮೌಲ್ಯಮಾಪನ ಮಾಡಲು ಪ್ರಾರಂಭಿಸಿದರು. ಮನೆಯ ಒಳಗಡೆ ಹೋದಾಗ ವೆರಾಂಡಾದಲ್ಲಿ ಯುಪಿಎಸ್ ಬಾಕ್ಸ್, ಶೋಕೇಸ್ ಮತ್ತು ಅಲಂಕಾರಿಕ ವಸ್ತುಗಳು ಇದ್ದವು. ನಂತರ ಲಿವಿಂಗ್ ಹಾಲ್ ಗೆ ಹೋದಾಗ ಅಲ್ಲಿ ಸೋಫಾ ಸೆಟ್, ದಿವಾನ್ ಕಾಟ್, ಹಳೇ ಟಿವಿ, ಟಿಪಾಯಿ ಇದ್ದವು. ಮಾಸ್ಟರ್ ಬೆಡ್ ರೂಂಗೆ ಹೋದಾಗ, ಮರದ ವಾಡ್ರೋಬ್ ನಲ್ಲಿ ಪ್ಲಾಸ್ಟಿಕ್ ಕವರಿನಲ್ಲಿ 5,01,700/-ರೂಪಾಯಿ ಇತ್ತು. ಅದನ್ನು ಪೊಲೀಸರು ತೆಗೆದುಕೊಂಡರು. ಅದರಲ್ಲಿಸೀರೆ, ವಿಮಾ ಪಾಲಿಸಿಗಳು, ಮಕ್ಕಳ ಶೈಕ್ಷಣಿಕ ಶುಲ್ಕಪಾವತಿ ರಶೀದಿಗಳು ಇದ್ದವು. 2ನೇ ಕಂಪಾರ್ಟ್ ಮೆಂಟ್ ನಲ್ಲಿ, ವರು ಉಪಯೋಗಿಸುತ್ತಿದ್ದ ವಾಹನಗಳಿಗೆ ಸಂಬಂಧಿಸಿದಂತೆ ಚಲನ್ ಗಳು, ದಾಖಲಾತಿಗಳು ಇದ್ದವು. ನ್ಯಾಷನಲ್ ಇನ್ಸುರೆನ್ಸ್ ಕಂಪನಿ, ಪಿಎಸಿಎಲ್, ಐಸಿಐಸಿಐ, ವಿಮಾ ಕಂಪೆನಿಗಳ ಪಾಲಿಸಿಗಳು ಇದ್ದವು. ಹೆಂಗಸರ ಚಿನ್ನಾಭರಣಗಳು ಕೂಡ ಇದ್ದವು. ಅದು ಸುಮಾರು 445ಗ್ರಾಂ ಇತ್ತು. ಗಂಡಸರ ಚಿನ್ನಾಭರಣಗಳು ಸುಮಾರು 199ಗ್ರಾಂ ನಷ್ಟು ಇತ್ತು. ಅವರ ಹೆಂಡತಿ ಹೆಸರಿನಲ್ಲಿ ಖರೀದಿಸಿದ ಸ್ವತ್ತಿನ ದಾಖಲೆ ಪತ್ರಗಳು ಇದ್ದವು. ಆನಂದ್ ರವರ ಹೆಸರಿಗೆ ಹೌಸಿಂಗ್ ಬೋರ್ಡ್ ನಲ್ಲಿ 2001ರಲ್ಲಿ

ಮನೆ ಮಂಜೂರಾದ ಬಗ್ಗೆ ದಾಖಲೆಗಳು ಇದ್ದವು. ಕುವೆಂಪುನಗರದಲ್ಲಿ ಅವರ ತಂದೆ ಹೆಸರಿನಲ್ಲಿದ್ದ ಮನೆಯ ದಾಖಲೆಗಳಿದ್ದವು. ಆ ಮನೆಯನ್ನು ಬೇರೆಯವರಿಗೆ ಭೋಗ್ಯಕ್ಕೆ ಹಾಕಿದ ಬಗ್ಗೆ ದಾಖಲೆಗಳಿದ್ದವು. ವಿವಿಧ ಬ್ಯಾಂಕಿನಲ್ಲಿ ಹಣ ಇದ್ದ ಬಗ್ಗೆ ದಾಖಲೆಗಳಿದ್ದವು.

4.ಇನ್ನೊಂದು ರೂಂ ನಲ್ಲಿ ವಾಷಿಂಗ್ ಮಿಷಿನ್ ಇತ್ತು. ಬಾತ್ ರೂಂ ನಲ್ಲಿ ಗ್ಯಾಸ್ ಗೀಸರ್ ಇತ್ತು. ಅಡುಗೆ ಮನೆಯಲ್ಲಿ ವಾಟರ್ ಫಿಲ್ಟರ್ ಇತ್ತು. ಎಲೆಕ್ಟ್ರಾನಿಕ್ ಉಪಕರಣಗಳಾದ ಓವನ್ ಇತ್ತು. ಮೇಲಿನ ರೂಂನಲ್ಲಿ ಮಕ್ಕಳಿಗೆ ಸಂಬಂಧಪಟ್ಟ ವಸ್ತುಗಳಿದ್ದವು. ಕಂಪ್ಯೂಟರ್ ಇತ್ಯಾದಿ ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಸಲಕರಣೆಗಳಿದ್ದವು. ಗೃಹೋಪಯೋಗಿ ವಸ್ತುಗಳು, ಆಹಾರ ಸಾಮಗ್ರಿಗಳು, ಇದ್ದವು. ಈ ಬಗ್ಗೆ ಮಹಜರು ಮಾಡಿ ನನ್ನ ಮತ್ತು ಅಬಕಾರಿ ಇಲಾಖೆಯ ನೌಕರರ ಸಹಿಯನ್ನು ಪಡೆದುಕೊಂಡರು. ಆ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-15 ಎಂದು ಅದರಲ್ಲಿ ಎಲ್ಲಾ ಪುಟಗಳಲ್ಲಿ ನನ್ನ ರುಜು ಇದ್ದು ಕೊನೆಪುಟದಲ್ಲಿರುವ ನನ್ನ ರುಜುವನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಆನಂದ್ ರವರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿದ್ದಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ವಿ.ಎಂ.ಎಸ್ ವಕೀಲರಿಂದ**

ಶೋಧನಾ ವಾರೆಂಟನ್ನು ಲೋಕಾಯುಕ್ತ ಪೊಲೀಸರು ನೀಡಿರುತ್ತಾರೆ. ಶೋಧನಾ ವಾರೆಂಟ್ ನಲ್ಲಿ ನನ್ನ ರುಜು ಇರುವುದಿಲ್ಲ. ಮಹಜರನ್ನು ಲೋಕಾಯುಕ್ತ ಸಿಬ್ಬಂದಿಗಳು ಮಾಡಿರುತ್ತಾರೆ. ಅಲ್ಲಿ ಕಂಡುಬಂದ ವಸ್ತುಗಳಿಗೆ ಸಂಬಂಧಿಸಿದಂತೆ ಇದ್ದ ಬಿಲ್ಲುಗಳನ್ನು ಪೊಲೀಸರು ನಮಗೆ ತೋರಿಸಿರುತ್ತಾರೆ. ಆ ವಸ್ತುಗಳಿಗೆ ಮಾತ್ರ ಅವರು ಮೌಲ್ಯಮಾಪನ ಮಾಡಿರುತ್ತಾರೆ. ಉಳಿದ ವಸ್ತುಗಳಿಗೆ ಸಂಬಂಧಿಸಿದಂತೆ ಯಾವಾಗ ಯಾವ ಡೀಲರ್ ನಿಂದ

ಖರೀದಿಸಿದ್ದು ಮತ್ತು ಯಾವ ಆಧಾರದಲ್ಲಿ ಮೌಲ್ಯಮಾಪನ ಮಾಡಿದರೆಂದು ನನಗೆ ಗೊತ್ತಿಲ್ಲ.

2.ವರ್ಷದಿಂದ ವರ್ಷಕ್ಕೆ ವಸ್ತುಗಳ ಮೌಲ್ಯ ಬದಲಾಗುತ್ತಾ ಹೋಗುತ್ತದೆ ಎಂದರೆ ಸರಿ. ಹಾಗೆಯೇ ಖರೀದಿಸಿದ ವಸ್ತುಗಳ ಬೆಲೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತದೆ ಎಂದರೆ ಸರಿ. ನಿಪಿ-15ರಲ್ಲಿ ಪುಟ 12 ರಿಂದ 21ರಲ್ಲಿ ಖರೀದಿಸಿದ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ಮಹಜರ್ ಕಾಲದಲ್ಲಿ ಚಿನ್ನಾಭರಣಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡುವ ಪೂರ್ವ ಪರಿಣಿತರನ್ನು ಕರೆಸಿದ್ದರು. ಬೇರೆ ವಸ್ತುಗಳಿಗೆ ಸಂಬಂಧಿಸಿದಂತೆ ಅದಕ್ಕೆ ಸಂಬಂಧಿಸಿದ ಪರಿಣಿತರನ್ನುಕರೆಸಿ ಮೌಲ್ಯಮಾಪನ ಮಾಡಿಸಿಲ್ಲ. ಮಹಜರಿನಲ್ಲಿ ಆ ವಸ್ತುಗಳ ಮೌಲ್ಯವನ್ನು ಲೋಕಾಯುಕ್ತ ಪೊಲೀಸರೇ ಬರೆದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**